ಯಾವುದೋ ಅವ್ಯಕ್ತ ಕರುಳಿನ ಸಂಬಂಧ ನೋಡುಗನನ್ನು ಸ್ಪರ್ಶಿಸಿದಂತೆ, ಅವನ ಆತ್ಮದ ಜೊತೆ ಸರಸಾಟವಾಡಿದಂತೆ ಕಾಣುತ್ತಿತ್ತು. ಆಕೆ ಬಿಡಿಸುತ್ತಿದ್ದುದು ಚಿತ್ರಗಳೋ, ಅಥವಾ ಕಂಡೂಕಾಣದಂತೆ ವ್ಯವಹರಿಸುವ ಅಲೌಕಿಕ ಪವಾಡಗಳೋ ತಿಳಿಯುತ್ತಿರಲಿಲ್ಲ. ಸಣ್ಣ ತುಕಡಿಗಳಲ್ಲಿ ತಯಾರಾಗುತ್ತಿದ್ದ ಕುಲಾಯಿ, ಕುಂಚಗಿಗಳು ಕೈಗೆ ಹತ್ತಬಹುದಾದ ಬಣ್ಣಗಳಲ್ಲಿ ಅದ್ದಿ ತೆಗೆದ ಕಲಾಕುಸುರಿನ ಲೋಕೋತ್ತರ ವಸ್ತುಗಳಂತೆ ಗೋಚರಿಸುತ್ತಿದ್ದವು. ಆಕೆ ತಯಾರಿಸುತ್ತಿದ್ದ ವಸ್ತುಗಳನ್ನು ಮುಟ್ಟಿದರೆ ಗಟ್ಟಿಗೊಂಡ ನೆಮ್ಮದಿಯ ಸುಳಿಗಾಳಿ ಸ್ಪರ್ಶಿಸಿ ಹೋದಂತಾಗುತ್ತಿತ್ತು. ಅವುಗಳಲ್ಲಿ ತಿಳಿಗೊಳದ ಆಳವಿರುತ್ತಿತ್ತು. ಮನಸ್ಸಿಗೆ ತಂಪು ಎನಿಸುತ್ತಿತ್ತು. ಮಕ್ಕಳನ್ನು ದುಬಟಿಯಲ್ಲಿ ಎತ್ತಿ ಸಾವಕಾಶವಾಗಿ ದುಬಟಿಯಲ್ಲಿ ಸುತ್ತಿದರೆ ನೀಲಿ ಆಕಾಶವನ್ನೇ ಸುತ್ತಿದಂತಾಗುತ್ತಿತ್ತು. ಮಕ್ಕಳು ಆ ಆಕಾಶದಲ್ಲಿ ವಿಹರಿಸುತ್ತಿದ್ದವು. ಎಲ್ಲ ನಾಡಿನ ಪಕ್ಷಿಗಳು, ಗಿಳಿಗಳು, ಗೊರವಂಕಗಳು ಅಲ್ಲಿರುತ್ತಿದ್ದವು. ಹಾಡುಗಳು ಕೇಳುತ್ತಿದ್ದವು. ಆತ್ಮದ ಹಲವು ಪದರುಗಳ ಮೆತ್ತಗಿನ ದುಬಟಿಯ ಮಧ್ಯೆ ಎಳಕಲು, ನಾಜೂಕಿನ ದೇಹ ಆಶ್ರಯ ತಾಣ ಹುಡುಕಿಕೊಂಡಿತ್ತು. ಅಲ್ಲಿಯ ಸಂಗೀತ, ಆಲಾಪಗಳೇ ಬೇರೆಯಾಗಿರುತ್ತಿದ್ದವು. ಅಲ್ಲಿ ಹೃದಯದ ಹಾಡು ಕೇಳುತ್ತಿತ್ತು. ಹುಟ್ಟಿ ಬೆಳೆಯುವ ಮಕ್ಕಳ ಸಣ್ಣ ಸಣ್ಣ ವಸ್ತುಗಳನ್ನು ತಯಾರಿಸುವಲ್ಲಿ ಲಕ್ಷ್ಮವ್ವನ ಜೀವಿತ ಕಾಲದ ಪರಿಶ್ರಮವಿತ್ತು. ಆಕೆ ನೈಜ ಬದುಕಿನ ಕಲಾವಿದೆಯಾಗಿದ್ದಳು. ಆಕೆ ಬಟ್ಟೆಯ ಮೇಲೆ ಮುತ್ತಿನಲ್ಲಿ ರಾಜಹಂಸನನ್ನು ಸೃಷ್ಟಿಸಿ ಅದಕ್ಕೆ ನೀಲಿಯ ಕೊಳ ತಯಾರಿಸಿ, ಕಟ್ಟುಹಾಕಿ ಗೋಡೆಗೆ ತಾಗಿಸಿದರೆ ನೀಲಿಯ ಕೊಳದಲ್ಲಿ ರಾಜಹಂಸ ಈಜಿ ಹೋದಂತೆ ಕಾಣುತ್ತಿತ್ತು. ಕೆಲವು ಕೈಗಳಿರುತ್ತವೆ, ಅವು ಸೃಷ್ಟಿಸುವ, ಸದಾಕಾಲ ಸೃಜಿಸುವ ಶಕ್ತಿ ಪಡೆದಿರುತ್ತವೆ. ಅವರು ತಮ್ಮ ಕೈಗಳಿಂದ ಏನು ಮುಟ್ಟಿದರೂ ಅವು ಕಲಾಕೃತಿಗಳಾಗಿ ಒಡಮೂಡಿ ಬರುತ್ತವೆ. ಅವುಗಳನ್ನು ನೋಡಿದರೆ ಅವುಗಳು ಲಕ್ಷ್ಮವ್ವನ ಹಸ್ತಗುಣದ ಸೃಷ್ಟಿಗಳೆಂದೇ ಹೇಳಬಹುದಾಗಿತ್ತು. ಆಕೆ ಕುಂಚಿಗೆಗೆ ಝುಲ್ಪಿ ಹೂ ಕಟ್ಟುವುದನ್ನು ನೋಡಬೇಕಾಗಿತ್ತು. ಬಂಗಾರದ ಲೇಪನದ ದೊಡ್ಡದು, ಸಣ್ಣದು, ಅತಿ ಸಣ್ಣದು ಎನ್ನುವ ಮೂರು ಝುಲ್ಪಿ ಹೂಗಳನ್ನು ಕುಂಚಿಗೆಯ ತಲೆಯ ಮಧ್ಯದ ಭಾಗದಲ್ಲಿ ಪೇರಿಸಿ ಬಿಗಿ ಬಂಧುರವಾಗಿ ಕಟ್ಟುವ ರೀತಿಯೇ ಸೂಕ್ಷ್ಮ ಕಲಾಕುಸುರಿನ ಕೃತಿಯಂತೆ ಕಾಣುತ್ತಿತ್ತು. ಝುಲ್ಪಿ ಹೂವಿನ ಕುಂಚಿಗೆ ತಯಾರಿಸಿ, ಮಗುವಿನ ತಲೆಗೆ ಅದನ್ನು ಕಟ್ಟಿದರೆ, ಅದರಲ್ಲಿದ್ದ ಮಗು ಸಾಕ್ಷಾತ್ ಕೃಷ್ಣನಂತೇ ಗೋಚರಿಸುತ್ತಿತ್ತು. ಮಗು ಬಣ್ಣದ ತೈಲ ಚಿತ್ರದಂತೆ ನೋಡುಗರ ಮನಸ್ಸಿನಲ್ಲಿ ಮುದ್ರೆ ಒತ್ತುತ್ತಿತ್ತು. ಲಕ್ಷ್ಮವ್ವನ ಈ ರೀತಿಯ ಲೌಕಿಕದ ಕೃತಿಗಳು ಹೇಳಲಾಗದ, ಬರೆಯಲಾಗದ, ಹಿಡಿಯಲಾಗದ ಸಂತೋಷದ ಅಲೆಗಳನ್ನೆಬ್ಬಿಸಿ ಹೃದಯಕ್ಕೆ ಅಪ್ಪಳಿಸುವಂತೆ ಮಾಡುತ್ತಿದ್ದವು. ಲಕ್ಷ್ಮವ್ವ ದೇವರು ಕೂಡ ಮುಟ್ಟಬೇಕೆನ್ನುವ ದೈವಿಕ ಮಹಿಳೆಯಾಗಿದ್ದಳು.

★★★

ಅಣ್ಣನಿಗೆ ಮದುವೆಯಾಗಿ, ಅತ್ತಿಗೆ ಮನೆಗೆ ಬಂದಾಗ ಬೇಸಿಗೆಯ ಗಾಳಿ ಶುರುವಾದ ಅನಿಸಿಕೆ ಕೊಟ್ಟಿತ್ತು. ಕೀಲಿ ಕೈ ಕಳೆದುಹೋದ ಅನುಭವವಾಗಿತ್ತು. ಎಲ್ಲ ಆತಂಕ ಅಂಜಿಕೆಗಳ ಮಧ್ಯೆ ಬಂದ ಗಾಳಿ, ಸುದೈವದಿಂದ ಬೇಸಿಗೆಯ ಗಾಳಿಯಾಗಿರದೇ, ತಂಪು ಗಾಳಿಯಾಗಿತ್ತು. ಬೆಳೆದ ಗಿಡಗಳು ನೆಲದ ತೇವವನ್ನು ಹಿಡಿದಿಟ್ಟುಕೊಂಡಂತೆ ಎಲ್ಲರ ಮಧ್ಯದ ತಿಳಿವಳಿಕೆ ಹೊಸದಾಗಿ ಬಂದ ಅತ್ತಿಗೆಯನ್ನು ಮಲ್ಲಿಗೆಯ ದಂಡೆಯಲ್ಲಿ ತೂಗಿತ್ತು. ಮನೆಯ ವಾತಾವರಣವೇ ದೊಡ್ಡ ಮರದ ಕೆಳಗಿನ ನೆರಳಿನಂತಿತ್ತು. ಅತ್ತಿಗೆ ಬಂದು ಸಂಸಾರ ಪ್ರಾರಂಭವಾಯ್ತು. ಅತ್ತಿಗೆಗೆ ಕೆಲಸದ